# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 153**

**ಉತ್ತರಿಸಬೇಕಾದ ದಿನಾಂಕ : 14.02.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಯಾವ ಯಾವ ಸಹಕಾರ ಸಂಘಗಳ ಹಗರಣಗಳನ್ನು ಸಿ.ಬಿ.ಐ. ತನಿಖೆಗೆ ವಹಿಸಲಾಗಿದೆ, ಆ ಸಂಘಗಳ ಮೇಲಿರುವ ಆರೋಪಗಳೇನು: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ಬೆಂಗಳೂರು ನಗರದ ಜಿಲ್ಲೆಯಲ್ಲಿನ ಐ.ಎಂ.ಎ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ., ಬೆಂಗಳೂರು. ಈ ಸಹಕಾರ ಸಂಘದ ಅವ್ಯವಹಾರಗಳನ್ನು ಸಿ.ಬಿ.ಐ.ಯಿಂದ ತನಿಖೆ ನಡೆಸಲಾಗುತ್ತಿದೆ.<br>ಈ ಸಂಘದ ಕುರಿತು ಆರೋಪಗಳು ಕೆಳಕಂಡಂತಿವೆ.<br>• ಈ ಸಂಘವು ಸಾರ್ವಜನಿಕರು/ಸದಸ್ಯರಿಂದ ಠೇವಣಿ ಮೇಲೆ ಮಾಸಿಕ ಶೇ. 6 ರಿಂದ 7ರ ದರದಲ್ಲಿ ಬಡ್ಡಿ ನೀಡುವುದಾಗಿ. ಅಕ್ರಮವಾಗಿ ಠೇವಣಿ ಸಂಗ್ರಹಿಸಿ ಹಿಂದಿರುಗಿಸದೇ ಇರುವುದು.<br>• ಸಹಕಾರ ಸಂಘಗಳ ಕಾಯ್ದೆ ನಿಯಮಗಳ ವಿರುದ್ಧವಾಗಿ ಐ.ಎಂ.ಎ. ಜ್ಯುವೆಲರಿ ಹಾಗೂ ಇತರೆ ಐ.ಎಂ.ಎ ಸಮೂಹ ಸಂಸ್ಥೆಗಳಿಗೆ ಸಾಲ ನೀಡಿರುವುದು.<br>• ಕಾರ್ಯವ್ಯಾಪ್ತಿ ಮೀರಿ ಶಾಖೆಗಳನ್ನು ತೆರೆದು ಕಾರ್ಯನಿರ್ವಹಿಸಿರುವುದು.<br>• ಅಕ್ರಮವಾಗಿ ಅನ್ಯ ಖಾತೆಗಳಿಗೆ ಹಣ ವರ್ಗಾವಣೆ ಮಾಡಿರುವುದು.<br>• ಸಾಲ ನೀಡುವಲ್ಲಿ ಅವ್ಯವಹಾರ ಎಸಗಿರುವುದು. |
| ಆ) | ಪ್ರಸ್ತುತ ತನಿಖೆ ಯಾವ ಹಂತದಲ್ಲಿದೆ: | ವಿಚಾರಣೆಯು ಪ್ರಗತಿಯಲ್ಲಿರುತ್ತದೆ. |
| ಇ) | ಯಾವ ಸಹಕಾರ ಸಂಘಗಳ ಹಗರಣಗಳನ್ನು ಸಿ.ಬಿ.ಐ. ತನಿಖೆಗೆ ವಹಿಸುವಂತೆ ಒತ್ತಾಯ ಬಂದಿವೆ ಹಾಗೂ ಈ ಸಂಬಂಧ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ: | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿ ನೋಂದಣಿಯಾದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಸಿ.ಬಿ.ಐ ತನಿಖೆಗೆ ವಹಿಸುವಂತೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| ಈ) | ಇದ್ದಲ್ಲಿ, ಆ ಸಹಕಾರ ಸಂಘಗಳು ಯಾವುವು, ಆ ಸಂಘಗಳ ಮೇಲಿರುವ ಆರೋಪಗಳೇನು? | ಅನ್ವಯಿಸುವುದಿಲ್ಲ. |

**ಸಂಖ್ಯೆ: ಸಿಒ 13 ಸಿಆರ್‌ಸಿ 2023**

**(ಎಸ್.ಟಿ.ಸೋಮಶೇಖರ್)**

ಸಹಕಾರ ಸಚಿವರು